ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ತಾಲ್ಲೂಕ್ ಮಂಡಲಿಯ ಸಲಹಾ ಸಮಿತಿಗಳ ವಿಚಾರದಲ್ಲಿ ಏನು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ ಅದನ್ನು ನಾನು ಕೂಡಾ ಸ್ವಾಗತ ಮಾಡುತ್ತೇನೆ. ಈ ಸಂದರ್ಭದಲ್ಲಿ ತಮಗು ಕೂಡಾ ಅಭಿನಂದಿಸುತ್ತೆನ್ನೆ ಉಭಯತ್ರರನ್ನೂ ತಾವು ಕರೆಸಿ ಮಾತುಕತೆ ನಡೆಸಿದಿರಿ. ಇದರ ಬಗ್ಗೆ ಸರ್ವಸಮ್ಮತವಾದ ಅಭಿಪ್ರಾಯ ಬರಬೇಕು ಅನ್ನುವ ಉದ್ದೇಶದಿಂದ ವಿರೋಧಪಕ್ಷದ ಪರವಿಂದ ಇದರ ಬಗ್ಗೆ ಕೆಲವು ಕಾರಣಗಳನ್ನೂ. ಕೊಟ್ಟು ಕೆಲವು ಮಾದಗಳನ್ನೂ ಸಹ ಮಂಡನೆ ಮಾಡಿದಾಗ ಇದರ ಔಚಿತ್ಯವನ್ನು ತಿಳಿದು ಸರ್ಕಾರದ ವರು ಒಪ್ಪಿದ್ದಾರೆ. ಅದಕ್ಕಾಗಿ ನಿಜವಾಗಿಯೂ ನನಗೆ ಸಂತೋಷವಾಗಿದೆ. ಈ ಸಂದರ್ಭದಲ್ಲಿ ಸರ್ಕಾರದವರು ಏನು ಎಂದು ಒಂದು ಹೇಳಿಕೆಯನ್ನು ಕೊಟ್ಟರು ಅವನ್ನು ನಾನು ಸ್ವಾಗತ ಮಾಡುತ್ತೇನೆ.

ಅಧ್ಯಕ್ಷರು.—ನೀವಿಬ್ಬರೂ ಕೂಡ ನನ್ನ ಹತ್ತಿರ ಬಂದು ಮಾತುಕತೆ ನಡೆಸಿ ಈ ಸಮಸ್ಯೆಯನ್ನು ಬಗೆಹರಿಸಿದ್ದಕ್ಕಾಗಿ ನಿಮ್ಮಿಬ್ಬರಿಗೂ ನನ್ನ ಧನ್ಯವಾದಗಳು.

ಗಮನ ಸೆಳೆಯುವ ಸೂಚನೆ

ಬಿಳಿಗಿರಿ ರಂಗನ ಬೆಟ್ಟದ ಅರಣ್ಯದಲ್ಲಿ ಆನೆ ಮರಿಗಳನ್ನು ಕೊಲ್ಲುತ್ತಿರುವ ಬಗ್ಗೆ

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಮೈಸೂರು ತಾಲ್ಲೂಕಿನ ಬಿಳಿಗಿರಿ ರಂಗನ ಬೆಟ್ಟದ ಅರಣ್ಯದಲ್ಲಿ ಆನೆ ಮರಿಗಳನ್ನು ಕೊಲ್ಲುತ್ತಿರುವ ವಿಚಾರದ ಬಗ್ಗೆ ನಾನು ಅರಣ್ಯ ರಾಜ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಒಂದು ಹೇಳಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅದು ಈರೀತಿ ಇದೆ:

On 22-7-1985 at about 7 P. M. the Deputy Conservator of Forests, Chamarajanagar, received a wireless message from the B. R. Hills stating that the perambulation party of B. R. Hills section has found the Carcasses of three male elephants at Ballagadde area of B. R. T. Forest Range. Immediately on receipt of the information the Assistant Conservator of Forests and Assistatnt to the Deputy Conservator of Forests, Chamarajanagar, the Deputy Superintendent of Police, Chamarajanagar the Sub-Inspector of Police, Yelandur and the Range Forest Officer, B. R T. Range, Yelandur visited the area and started investigation in right earnest. The Veterinary Assistant Surgeon, of Government Elephants, Mysore conducted the postmartum of the dead elephants on 23rd and 24th July, 1985.

On 25-7-1985 the Conservator of Forests, Mysore Circle, Mysore inspected the spot along with the Veterinary Assistant Surgeon and the local Range staff. It has been established that the death of three male elephants is due to bullet shots of the poachers. The tusks have been taken away from all the three elephants. The scene of occurance of this crime is at an approximate distance of about 10 Kms. from the B. R. Hills Temple Village, and close to the 'D' line between B. R. T. Reserve Forests of Chamarajanagar and Doddasampige Reserve Forests of Kollegal Division. The Caracasses of the three

elephants were found lying within a range of 100 meters It appears that the poachers have taken advantage of the regular migratory movement of the elephant herd, and killed them. It is also estimated that the age of the elephant is about 20 years and of the other two between 10 and 15 years.

The protective staff all over Chamarajanagar and Kollegal Divisions have been alerted to look for the suspected culprits. The Police have also launched a big hunt for the suspected party involved in the crime. Senior Police and Forest Officers are camping in the area to investigate the matter.

† ಶ್ರೀಪತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಅರಣ್ಯ ಮಾಯವಾಗುತ್ತಾ ಇದೆ. ನಮ್ಮ ದೇಶದಲ್ಲಿ ಅರಣ್ಯ ಸಂಪತ್ತು ಅನ್ನುವುದು ಆನೆಗಳಿಂದ. ಈ ಆನೆಗಳು ಬದುಕಿದ್ದರೂ ಲಕ್ಷಾಂತರ ರೂಪಾಯಿ ಬೆಲೆ ಬಾಳುತ್ತದೆ. ಸತ್ತು ಹೋದರೂ ಸಹ ಲಕ್ಷಾಂತರ ರೂಪಾಯಿ ಬೆಲೆ ಬಾಳುತ್ತದೆ. ಆದರ ದಂತದಿಂದ. ಇವರು ಒಂದು ಆನೆಯನ್ನು ಕೊಂದಿಲ್ಲ. ೩ ಆನೆಯನ್ನು ಕೊಂದಿದ್ದಾರೆ. ಅಲ್ಲಿಯ ಫಾರೆಸ್ಟ್ ಗಾರ್ಡ್ ವಾಚ್ ಮಾಡುತ್ತಾ ಇರಲಿಲ್ಲವೇ? ಅವರು ೩ ಆನೆಗಳನ್ನು ಕೊಂದಿದ್ದಾರೆ. ಅವರಿಗೆ ಆ ದಂತ ಸಿಕ್ಕರಬೇಕು. ಆ ದಂತಗಳು ನಮ್ಮ ದೇಶದಲ್ಲಿ ಬಹಳ ಬೆಲೆಯಾಗುತ್ತದೆ ಇದರಲ್ಲಿ ಎಷ್ಟು ದಂತಗಳು ಸಿಕ್ಕಿವೆ ? ಎಷ್ಟು ವಶಪಡಿಸಿಕೊಂಡಿದ್ದೀರಿ ? ಅಧಿಕಾರಿಗಳು ಕೊಟ್ಟಿರತಕ್ಕಂಥಾ ಸ್ಟೇಟ್‌ಮೆಂಟ್‌ನ್ನು ತಾವು ಓದಿದ್ದೀರಾ ಇದರಿಂದ ನನಗೆ ಏನು ಗೊತ್ತಾಗುತ್ತದೆ ಎಂದರೆ ನಿಮ್ಮ ಅಧಿಕಾರಿಗಳು ಅಲರ್ಟ್ ಆಗಿದ್ದರು ಎಂದು ಕಾಣುತ್ತದೆ. ಆದುದರಿಂದ ಇದರ ಬಗ್ಗೆ ಇನ್‌ವೆಸ್ಟಿಗೇಷನ್ ಏನಾದರೂ ಮಾಡುತ್ತೀರಾ? ಎಷ್ಟು ದಿವಸದೊಳಗೆ ಮಾಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ, ೧೯೮೧ನೇ ಇಸವಿಯಿಂದಲೂ ಈ ಆನೆಗಳನ್ನು ಪತ್ತೆಹಚ್ಚತಕ್ಕಂಥ ಕೆಲಸ ಮಾಡುತ್ತಿದ್ದೇವೆ. ಸರ್ಕಾರದಿಂದ ಈ ಆನೆಗಳನ್ನು ಕೊಂದಂಥ ಹಂತಕನನ್ನು ಪತ್ತೆ ಹಚ್ಚಿದ್ದೇವೆ. ಮತ್ತು ಈ ಆನೆಗಳನ್ನು ಸಂರಕ್ಷಣೆ ಮಾಡುವುದಕ್ಕೆ ಹೊಸ ಸಿಸ್ಟಂ ಒಂದನ್ನು ಮಾಡಿದ್ದೇವೆ, ಇದಕ್ಕೊಂದು ಸ್ಕ್ವಾಡ್ ಸಿಸ್ಟಂ ಅನ್ನು ಮಾಡಿದ್ದೇವೆ. ಕಳೆದ ವರ್ಷದಲ್ಲಿ ಆನೆಗಳ ಸಂಖ್ಯೆ ಎಷ್ಟು ಇತ್ತು, ಹಿಂದಿನ ವರ್ಷದಲ್ಲಿ ಆನೆಗಳ ಸಂಖ್ಯೆ ಎಷ್ಟು ಇತ್ತು. ಈ ವರ್ಷದಲ್ಲಿ ಆನೆಗಳ ಸಂಖ್ಯೆ ಎಷ್ಟು ಇದೆ ಅನ್ನುವುದನ್ನು ಹೋಲಿಸಿ ನೋಡಿದರೆ ಈ ವರ್ಷ ಆನೆಗಳ ಸಂಖ್ಯೆ ಕಡಿಮೆ. ಆನೆಗಳ ಸಂಖ್ಯೆ ಕಡಿಮೆ ಇದ್ದರೂ ಕೂಡ ಫಾರೆಸ್ಟ್‌ನಲ್ಲಿ ಸಾಕಷ್ಟು ಸಿಬ್ಬಂದಿಯನ್ನು ಇಟ್ಟು ಅವುಗಳನ್ನು ಸಂರಕ್ಷಣೆ ಮಾಡುತ್ತಿದ್ದೇವೆ. ಮೊದಲು ೭ ಆನೆಗಳು ಹತ್ಯೆ ಆಗಿತ್ತು. ಈಗ ಅದರ ಜೊತೆಗೆ ಇನ್ನೂ ೩ ಆನೆಗಳು ಹತ್ಯೆಯಾಗಿವೆ. ನಾನು ಮೊದಲೇ ಹೇಳಿದ ಹಾಗೆ, ನನ್ನ ಹೇಳಿಕೆಯಲ್ಲಿ ಹೇಳಿದ ಹಾಗೆ ಹತ್ಯೆಗೊಳಗಾದ ಆನೆಯ ಬಗ್ಗೆ ಹಂತಕರನ್ನು ಇನ್ನೂ ಪತ್ತೆ ಹಚ್ಚಲು ಅರಣ್ಯ ಇಲಾಖೆಯ ಸಿಬ್ಬಂದಿಯವರು ಹಾಗೂ ಪೋಲೀಸ್ ಸಿಬ್ಬಂದಿಯವರು ಬಿ ಆರ್ ಟಿ ಹಿಲ್ಸ್ ಇನ್ನು ಇತರೇ ಭಾಗದಲ್ಲಿಯೂ ಹೆಚ್ಚಿನ ಆಸಕ್ತಿ ವಹಿಸಿ, ಇದರ ಜೊತೆಗೆ ಸ್ಕ್ವಾಡ್‌ನವರೂ ಸಹ ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದಾರೆ. ಈಗ ೩ ಆನೆಗಳು ಏನು ಹತ್ಯೆಯಾಗಿದೆ ಆದರ ದಂತಗಳು ಸಿಕ್ಕಿವೆ. ಇನ್ನೂ ೩ ಆನೆಗಳ ದಂತ ಕಲವಡೆಯಲ್ಲಿ ಸಿಕ್ಕಿದೆ. ಮಾನ್ಯ ಸದಸ್ಯರಲ್ಲಿ ನಾನು ಬೇಡಿಕೊಳ್ಳುವುದು ಇಷ್ಟೆ. ಈಗ ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ. ಇದು ಸಂದಿಗ್ಧ ಪರಿಸ್ಥಿತಿಯಲ್ಲಿದೆ. ಯಾರು ಆನೆಯನ್ನು ಹಿಡಿಯುತ್ತಿರೋ ಅವರ ಹತ್ತಿರ ಒಂದು ರ್ಯಾಕೆಟ್ ಇದೆ. ಅದನ್ನು ಪತ್ತೆಹಚ್ಚಬೇಕು. ಆ ರ್ಯಾಕೆಟ್‌ಅನ್ನು ನಾವು ಕಂಡುಹಿಡಿಯುತ್ತಾ ಇದ್ದೇವೆ. ಮಾನ್ಯ ಸದಸ್ಯರು ನಮ್ಮೊಂದಿಗೆ ಸಹಕರಿಸಬೇಕು. ಈಗ ಇದರ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಾ ಇರುವುದರಿಂದ ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈಗಲೇ ಅವರ ಪ್ರೋಚಸ್ ಎಲ್ಲಿದೆ ಎಂದು ಹೇಳುವುದಕ್ಕೆ ಕಷ್ಟವಾಗಬಹುದು.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.